ಕೂದಲನ್ನು ಫ್ರೀಯಾಗಿ ಬಿಟ್ಟುಕೊಂಡರೆ ನಿಮ್ಮ ಅಂದವನ್ನು ದುಪ್ಪಟ್ಟು ಮಾಡುತ್ತದೆ. ಕ್ಯಾಂಡಲ್ ಲೈಟ್ ಡಿನ್ನರ್ ಯೋಜನೆಯಲ್ಲಿರುವವರಿಗೆ ಕಪ್ಪು ಬಣ್ಣದ ಉಡುಪು ಹೆಚ್ಚು ಸೂಕ್ತ. ಚಿಕ್ಕ ಫ್ರಾಕ್ ರೀತಿ ಕಪ್ಪು ಬಣ್ಣದ ಧಿರಿಸು ತೊಟ್ಟು, ಸ್ಮೋಕಿ ಐ ಮೇಕಪ್ ಮಾಡಿಕೊಂಡು ಕೂದಲನ್ನು ಕರ್ಲ್ ಮಾಡಿಕೊಂಡರೆ ಎಲ್ಲರ ಕಣ್ಣು ನಿಮ್ಮ ಮೇಲೆಯೇ ನೆಟ್ಟಿರುತ್ತದೆ.

ಹಾಗೇ ವ್ಯಾಲೆಂಟೈನ್‌ಗೆಂದು ಹ್ಯಾಂಡ್ ಮೇಡ್ ಕಸೂತಿ ಪಾಮ್ ಸ್ವೆಟರ್ ಕೂಡ ಈಗ ಮಾರುಕಟ್ಟೆಯಲ್ಲಿದೆ. ಇದು ಸ್ಟೈಲಿಷ್ ನೋಟ ನೀಡುವುದರ ಜತೆಗೆ ಚುಮು ಚುಮು ಚಳಿಗೆ ನಿಮ್ಮನ್ನು ಬೆಚ್ಚಗೆ ಇರಿಸುತ್ತದೆ. ಜೀನ್ಸ್, ಮಿನಿ ಸ್ಕರ್ಟ್ ಅಥವಾ ಲೆಗಿಂಗ್ಸ್‌ಗೆ ಕೂಡ ಹೇಳಿ ಮಾಡಿಸಿದ್ದು.

ಕಪ್ಪು ಬಣ್ಣದ ಫ್ರಿಂಜ್ ಟ್ರಿಮ್ಡ್ ಮಿಡಿಗೆ ಸ್ಟೈಲಿಷ್ ಆಗಿರುವ ಮೆಟಾಲಿಕ್ ಕಾಲ್ಗೆಜ್ಜೆಯನ್ನು ಹಾಕಿಕೊಂಡರೆ ಇದು ಕೂಡ ನಿಮ್ಮನ್ನು ಹೆಚ್ಚು ಸ್ಟೈಲಿಷ್ ಆಗಿ ಕಾಣುವಂತೆ ಮಾಡುತ್ತದೆ.

ಫೌಕ್ಸ್ ಲೆದರ್ ಧಿರಿಸು ಕೂಡ ವ್ಯಾಲೆಂಟೇನ್‌ಡೇ ಅಂದು ನಿಮ್ಮತ್ತ ಸಂಗಾತಿಯ ಪ್ರೀತಿಯ ನೋಟವನ್ನು ನೆಡುವಂತೆ ಮಾಡುತ್ತದೆ. ಬಿಳಿ ಬಣ್ಣದ ಸ್ಲೌಚ್ ಬೂಟ್ಸ್ ಈ ಡ್ರೆಸ್‌ಗೆ ಹೆಚ್ಚು ಸರಿ ಹೊಂದುತ್ತದೆ.

ಹೂವಿನ ವಿನ್ಯಾಸ ಇರುವ ಚಿಕ್ ಫ್ಲೋರಲ್ ಬ್ಲೌಸ್‌ನೊಂದಿಗೆ ಅದೇ ಬಣ್ಣದ ಅಗಲವಾದ ಪ್ಯಾಂಟ್, ಕಿವಿಗೆ ಹೂಪ್ಸ್ ಹಾಕಿಕೊಂಡರೆ ನಿಮ್ಮ ಲುಕ್ ಅನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಸ್ಟೈಲಿಷ್ ಆಗಿರುವ ಆಫ್ ಶೋಲ್ಡರ್ ಫ್ರಿಲ್ಡ್ ಬೌಸ್‌ಗೆ ನಿಮ್ಮಿಷ್ಟದ ಪ್ಯಾಂಟ್, ಲೆಗಿಂಗ್ಸ್ ಹಾಕಿದರೆ ನಿಮ್ಮ ವ್ಯಾಲೆಂಟೇನ್ ಡೇ ಲುಕ್ ಸಖತ್ ಆಗಿರುತ್ತದೆ.

ಸ್ಯಾಟಿನ್ ಜಂಪ್ ಸೂಟ್ ಲೇಪರ್ಡ್ ಜಾಕ್ವರ್ಡ್ ವಿನ್ಯಾಸದ ಧಿರಿಸು ತೊಟ್ಟು ಕಿವಿಗೆ ಕ್ರಿಸ್ಟಲ್ ಹೂಪ್ಸ್



## ಪ್ರೇಮಿಗಳ ದಿನಕ್ಕಾಗಿ ಸ್ಟೈಲಿಷ್ ಔಟ್‌ಫಿಟ್!

ಹಾಕಿದರೆ ನಿಮ್ಮ ಡೇಟ್ ನೈಟ್ ಔಟ್ ಫಿಟ್‌ಗೆ ಎಲ್ಲರೂ ಫಿದಾ ಆಗುವುದು ಗ್ಯಾರಂಟಿ.

ಕಪ್ಪು ಬಣ್ಣದ ಉಡುಪಿನ ಮೇಲೆ ಗುಲಾಬಿ ಬಣ್ಣದ ಪೋಲ್ಕಾ ಚುಕ್ಕಿಯ ಕ್ರಾಪ್ ಟಾಪ್ ಅದಕ್ಕೆ ಮ್ಯಾಚಿಂಗ್ ಆಗಿರುವ ಮಿನಿಸ್ಕರ್ಟ್ ಹಾಕಿದರೆ ಸಖತ್ ಆಗಿ ಕಾಣಬಹುದು.

ಈಗ ಪಫ್ ಸ್ಲಿವ್ ಡ್ರೆಸ್‌ಗಳು ಟ್ರೆಂಡ್‌ನಲ್ಲಿವೆ. ಪಫ್ ಸ್ಲಿವ್ ಇಷ್ಟಪಡುವವರಿಗಾಗಿ ಪಫ್ ಸ್ಲಿವ್ ಪೋಲ್ಕಾ ಡಾಟ್ ಇರುವ ಮಿನಿ ಡ್ರೆಸ್ ಹಾಕಬಹುದು.

ಲೇಸ್ ಧಿರಿಸುಗಳು ಕೂಡ ಈ ವ್ಯಾಲೆಂಟೇನ್ ಡೇ ಅಂದು ನಿಮ್ಮನ್ನು ಮತ್ತಷ್ಟು ಸುಂದರವಾಗಿಸುತ್ತದೆ. ರೊಮ್ಯಾಂಟಿಕ್ ನೈಟ್ ಔಟ್‌ಗೆ ತೋಳಿಲ್ಲದ ಲೇಸ್ ದಿರಿಸು ತೊಟ್ಟರೆ ಮುದ್ದಾಗಿ ಕಾಣುತ್ತೀರಿ.

ಇನ್ನು ಲೆದರ್ ಯಾವಾಗಲೂ ಔಟ್ ಆಫ್ ಫ್ಯಾಷನ್ ಆಗುವುದಿಲ್ಲ. ವ್ಯಾಲೆಂಟೈನ್ ಡೇ ಡಿನ್ನರ್‌ಗೆ ಫೌಕ್ಸ್ ಲೆದರ್ ಧಿರಿಸು ತೊಟ್ಟು ಉದ್ದನೆಯ ಬೂಟ್ಸ್ ಹಾಕಿದರೆ ಲುಕ್ ಚೆನ್ನಾಗಿರುತ್ತದೆ.

ಪೋಲ್ಕಾ ಡಾಟ್ ಇರುವ ನಿಯೋಪ್ರೇನ್ ಸ್ಕರ್ಟ್‌ಗೆ ಉದ್ದನೆಯ ಸ್ಲೀವ್ ಇರುವ ಟಾಪ್ ಹೆಚ್ಚು ಸೂಟ್ ಆಗುತ್ತದೆ. ಹೈ ಹೀಲ್ಸ್ ಧರಿಸಿದರೆ ಈ ಡ್ರೆಸ್‌ನ ಅಂದ ಹೆಚ್ಚುತ್ತದೆ.

ಇನ್ನು ಬೆಲ್ಟೆಡ್ ಬ್ಲೇಜರ್ ದಿರಿಸಿಗೆ ಸಿಲ್ವರ್ ಬಣ್ಣದ ಹೀಲ್ಸ್ ಹಾಕಿ, ಕಿವಿಗೆ ಹೂಪ್ಸ್ ಹಾಕಿದರೆ ಸ್ಟೈಲಿಷ್ ಲುಕ್ ಆಗಿರುತ್ತದೆ.

ಇನ್ನು ಉಡುಪಿಗೆ ತಕ್ಕ ಮೇಕಪ್ ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಅತಿಯಾದ ಮೇಕಪ್‌ಗಿಂತ ಸಿಂಪಲ್ ಟಚ್ ಅಪ್ ಮಾಡಿಕೊಂಡರೆ ಚೆನ್ನಾಗಿರುತ್ತದೆ. ಆದರೆ ಲಿಪ್‌ಸ್ಟಿಕ್ ಆಯ್ಕೆ ಮಾಡಿಕೊಳ್ಳುವಾಗ ಮಾತ್ರ ಹೆಚ್ಚು ಜಾಗ್ರತೆ ವಹಿಸಬೇಕು. ನಿಮ್ಮ ಸ್ಕಿನ್ ಟೋನ್, ವರ್ಷ ಎಲ್ಲವನ್ನೂ ದೂರ ತಳ್ಳಿ. ವ್ಯಾಲೆಂಟೈನ್ಸ್ ಡೇಗೆ ಈ ಲಿಪ್‌ಸ್ಟಿಕ್ ಶೇಡ್ ಅನ್ನು ಆಯ್ಕೆ ಮಾಡಿಕೊಳ್ಳಿ.

ಗ್ಲಾಸಿ ಪಿಂಕ್ ಬಣ್ಣದ ಲಿಪ್ ಶೆಡ್ಸ್ ನಿಮ್ಮ ತುಟಿಯ ಅಂದವನ್ನು ಹೆಚ್ಚಿಸುವುದರ ಜತೆಗೆ ನಿಮ್ಮ ಅಂದಕ್ಕೂ ಮೆರುಗು ನೀಡುತ್ತದೆ.

ಮ್ಯಾಟ್ ಲಿಕ್ವಿಡ್ ಲಿಪ್‌ಸ್ಟಿಕ್ ಕೂಡ ಈ ವ್ಯಾಲೆಂಟೇನ್ಸ್ ಡೇ ಅಂದು ನಿಮ್ಮನ್ನು ಸ್ಟೈಲಿಷ್ ಆಗಿ ಕಾಣುವಂತೆ ಮಾಡುತ್ತದೆ. ಇದು ಯಾವ ಡ್ರೆಸ್‌ಗೂ ಕೂಡ ಮ್ಯಾಚ್ ಆಗುತ್ತದೆ.

ಇನ್ನು ನೀವು ರಾತ್ರಿಯ ಪಾರ್ಟಿಗೆ ನ್ಯೂಡ್ ಲಿಕ್ವಿಡ್ ಲಿಪ್‌ಸ್ಟಿಕ್ ಕೂಡ ಉಪಯೋಗಿಸಬಹುದು.

ವ್ಯಾಲೈಂಟೇನ್ಸ್ ಡೇ ಅಂದು ಕೆಂಪುಬಣ್ಣಕ್ಕೆ ಹೆಚ್ಚು ಪ್ರಾಶಸ್ತ್ಯ. ಕ್ಲಾಸಿಕ್ ರೆಡ್ ಲಿಪ್‌ಸ್ಟಿಕ್ ಹಚ್ಚಿಕೊಳ್ಳಬಹುದು. ನಿಮ್ಮ ತುಟಿಯನ್ನೇ ಹೈ ಲೈಟ್ ಮಾಡಬೇಕೆಂದಿದ್ದರೆ ಗಾಢ ವೈನ್ ಬಣ್ಣದ ಲಿಪ್‌ಸ್ಟಿಕ್ ಆಯ್ಕೆ ಮಾಡಿಕೊಳ್ಳಿ. ಇದು ಎಲ್ಲಾ ವಿನ್ಯಾಸದ ಉಡುಪಿಗೂ ಸೂಕ್ತವಾಗುತ್ತದೆ. ಕಪ್ಪು ಮತ್ತು ಕೆನೆ ಬಣ್ಣದ ಉಡುಪಿಗೆ ಹೇಳಿ ಮಾಡಿಸಿದ ಶೇಡ್ ಇದು.

ತುಂಬಾ ಗಾಢ ಬಣ್ಣ ಇಷ್ಟ ಇಲ್ಲದೇ ಇರುವವರು ಪೀಚ್ ಶೇಡ್ ಉಪಯೋಗಿಸಬಹುದು. ಇದರ ಮೇಲೆ ಸ್ವಲ್ಪ ಗ್ಲೋಸ್ ಸೇರಿಸಿದರೆ ಶೈನಿಂಗ್ ಇರುತ್ತದೆ. ನಿಮ್ಮ ಬಾಯಿಯ ಸುತ್ತ ಸ್ವಲ್ಪ ಕನ್ಸಿಲರ್ ಹಚ್ಚಿಕೊಂಡರೆ ತುಟಿ ಎದ್ದು ಕಾಣುತ್ತದೆ.

### ಲಿಪ್‌ಸ್ಟಿಕ್ ಹಚ್ಚಿಕೊಳ್ಳುವಾಗ



- ಮೊದಲು ನಿಮ್ಮ ತುಟಿಯನ್ನು ಸ್ಕ್ರಬ್ ಮಾಡಿಕೊಳ್ಳಿ. ಒಂದು ಚಮಚ ಸಕ್ಕರೆ, 1 ಚಮಚ ಜೇನುತುಪ್ಪ ಇವೆರೆಡನ್ನು ಸೇರಿಸಿಕೊಂಡು ನಿಮ್ಮ ತುಟಿಯ ಮೇಲೆ ನಿಧಾನಕ್ಕೆ ಉಜ್ಜಿ. ಇದರಿಂದ ತುಟಿಯ ಮೇಲಿರುವ ಡೆಡ್ ಸ್ಕಿನ್ ಹೋಗುತ್ತದೆ.
- ಯಾವುದಾದರೂ ಒಳ್ಳೆಯ ಲಿಪ್ ಬಾಮ್ ಹಚ್ಚಿಕೊಳ್ಳಿ. ಇದು ನಿಮ್ಮ ತುಟಿಯನ್ನು ಮಾಯಿಶ್ಚರೈಸ್ ಮಾಡಲು ಸಹಾಯ ಮಾಡುತ್ತದೆ.
- ಲಿಪ್ ಪ್ರೈಮರ್ ಹಚ್ಚಿಕೊಳ್ಳಿ. ಇದು ಇಡೀ ದಿನ ನಿಮ್ಮ ತುಟಿಯಲ್ಲಿ ಲಿಪ್‌ಸ್ಟಿಕ್ ಇರುವಂತೆ ಮಾಡುತ್ತದೆ.
- ನಂತರ ಲಿಪ್ ಲೈನರ್ ಹಚ್ಚಿಕೊಳ್ಳಿ. ನೀವು ಯಾವ ಶೇಡ್ ಹಚ್ಚಿಕೊಳ್ಳುತ್ತೀರಿ ಎಂಬುದನ್ನು ನೋಡಿ ಇದನ್ನು ಆಯ್ಕೆ ಮಾಡಿಕೊಳ್ಳಿ.
- ನಂತರ ನಿಮ್ಮಿಷ್ಟದ ಲಿಪ್‌ಸ್ಟಿಕ್ ಹಚ್ಚಿಕೊಳ್ಳಿ. ಲಿಕ್ವಿಡ್ ಲಿಪ್‌ಸ್ಟಿಕ್ ಹಚ್ಚಿಕೊಳ್ಳುವಾಗ ಸ್ವಲ್ಪ ಜಾಗ್ರತೆ ವಹಿಸಿರಿ.